

**ನೊ**ರೆನೊರೆಯಂಥ ಕೋಟೆಯೊಳಗೊಂದು ಕೀಟ! **Spit bug** ಅಥವಾ **spittle bug** ಎಂದು ಕರೆಯಲ್ಪಡುವ ತಿಗಣೆಯ ಜಾತಿಗೆ ಸೇರಿದ ಕೀಟವಿದು. ಮೂತಿಯು ಕಪ್ಪೆಯ ಮೂತಿಯನ್ನು ಹೋಲುವುದರಿಂದ **Froghopper** ಎಂದೂ ಕರೆಯಲಾಗುತ್ತದೆ. ಕುಟುಂಬ **Aphrophoridae,** ವರ್ಗ **Homoptera.** ಪ್ರಪಂಚದಾದ್ಯಂತ ಕಂಡುಬರುತ್ತವೆ. ಇವುಗಳಲ್ಲಿ ಸುಮಾರು 850 ಉಪಜಾತಿಗಳಿವೆ!

ಇವು ತಮ್ಮ ಕೊಳವೆಯಾಕಾರದ ಮೂತಿಯಿಂದ ಸಸ್ಯಗಳ ರಸ ಹೀರಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಆದರೆ ಆ ಸಸ್ಯಕ್ಕೆ ತೀರಾ ಹಾನಿಯುಂಟು ಮಾಡುವ ಮಟ್ಟಕ್ಕಲ್ಲ. ಮರಿಗಳು ತಮ್ಮ ಬೆಳವಣಿಗೆಯ ಕಾಲದಲ್ಲಿ ಉಗುಳಿನಂತಹ ಆವರಣದೊಳಗೆ ವೈರಿಗಳಿಂದ, ಅತಿ ಉಷ್ಣತೆಯಿಂದ ರಕ್ಷಣೆ ಪಡೆಯುತ್ತವೆ. ಗಿಡಗಳ ಮೇಲೆ ಕುಳಿತು ತಮ್ಮ ಹೊಟ್ಟೆಯಿಂದ ಬಿಳಿನೊರೆಯನ್ನು ಹೊರಹಾಕುತ್ತವೆ. ಅದು ಅವುಗಳ ದೇಹದ ಸುತ್ತ ಆವರಿಸಿಕೊಳ್ಳುತ್ತದೆ. ನಂತರ ಬಾಯಿಯಿಂದ ಗುಳ್ಳೆಗಳನ್ನೆಬ್ಬಿಸಿ ನೊರೆಯ ಗಾತ್ರವನ್ನು ಹಿಗ್ಗಿಸುತ್ತವೆ. ಪೂರ್ಣ ಬೆಳೆದ ನಂತರ, ಅಂದರೆ ನಾಲ್ಕೈದು ಸಲ ಪೊರೆ ಕಳಚಿದ ನಂತರವೇ, ಇವು ಗುಳ್ಳೆಯ ಅರಮನೆಯಿಂದ ಆಚೆ ಬರುತ್ತವೆ.

ವಯಸ್ಕ ತಿಗಣೆಗಳು ಚಿಕ್ಕ ಗಾತ್ರದಲ್ಲಿದ್ದು (ಅರ್ಧ ಸೆಂಟಿ ಮೀಟರ್‌ನಿಂದ ಒಂದು ಸೆಂ.ಮೀ) ಗಿಡದಿಂದ ಗಿಡಕ್ಕೆ ಜಿಗಿಯುತ್ತವೆ. ಹೆಣ್ಣು ತಿಗಣೆಗಳು ಗಿಡಗಳ ಸಂದುಗಳಲ್ಲಿ ಸಾಲಾಗಿ ಮೊಟ್ಟೆಗಳನ್ನು ಇಡುತ್ತವೆ. ಮರಿಗಳು ಹಸಿರು ಬಣ್ಣದಲ್ಲೂ ವಯಸ್ಕ ತಿಗಣೆಗಳು ಕಪ್ಪು ಅಥವಾ ಕಂದು ಬಣ್ಣದಲ್ಲೂ ಕಂಡುಬರುತ್ತವೆ.

ರೈತರು ಇವುಗಳನ್ನು ಉಪದ್ರವಕಾರಿಗಳೆಂದು ತಿಳಿಯುವುದುಂಟು. ಆದರೆ ಇವುಗಳಿಂದ ಬೆಳೆಗಳಿಗೆ ಹೆಚ್ಚಿನ ಹಾನಿಯೇನೂ ಆಗುವುದಿಲ್ಲ.

# ಉಗುಳು ತಿಗಣೆ!

■ ಚಿತ್ರ– ಬರಹ: **ಬಿ.ಎಸ್.ರಾಜಲಕ್ಷ್ಮಿ**

